# ನೀವು ಕೇಳಿದಿರಿ?

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಗುಲಾಬಿ ಹೂ ಪ್ರೀತಿಯ ಸಂಕೇತ. ಅದರ ಮುಳ್ಳು?



ಪ್ರಿಯರಿಗೆ ನೀಡಬೇಕಾದ ಉಡುಗೊರೆಗೆ ಮಾಡಿದ ಸಾಲದ ಸಂಕೇತ.

ವಿ.ಕೆ. ಹಳ್ಯಾಳ, ಬನಹಟ್ಟಿ

ಮನುಷ್ಯ ಹೆಚ್ಚು ಹೆದರುವುದು ರೋಗಕ್ಕೋ, ಸಾವಿಗೋ?

ಎರಡಕ್ಕೂ ಅಲ್ಲ– ನರ್ಸಿಂಗ್ ಹೋಂನ ಬಿಲ್ಲಿಗೆ.

ಬಿ.ಆರ್. ಉಷಾ, ಬೆಂಗಳೂರು

ಪ್ರಶ್ನೆಗೆ ಉತ್ತರಿಸುವುದಕ್ಕೆ ದಕ್ಷಿಣೆ ಕೊಡಬೇಕೆ?

ಹೂಂ. ಉತ್ತಮ ಪ್ರಶ್ನೆ ಕೇಳಲು ನಿಮ್ಮ ಮನವೇ ವಿಷಯಗಳ ಸುತ್ತ ಪ್ರ–ದಕ್ಷಿಣೆ ಹಾಕಬೇಕು.

ಅನಸೂಯ ಟಿ. ಕೇದಿಗೆಮನೆ

ನೀರಿನ ಮೇಲಿನ ಗುಳ್ಳೆ ನಿಜವಾದರೆ?

ನೀರು ಗುಣಪಡಿಸಲಾರದಷ್ಟು ಮಲಿನವಾಗಿದೆ ಎಂದರ್ಥ.

ಟಿ.ಎಂ. ಮಾನಪ್ಪ, ಶಿವಮೊಗ್ಗ

ತಲೆ ಸುತ್ತುವುದಕ್ಕೂ, ಭೂಮಿ ಸುತ್ತುವುದಕ್ಕೂ ವ್ಯತ್ಯಾಸವೇನು?



ಇದು ವಿಶ್ರಾಂತಿಗೆ ಪ್ರೇರಕ; ಅದು ಸಂಕ್ರಾಂತಿಗೆ ಪ್ರೇರಕ.

ಎಸ್.ಎನ್. ಮಹಾಬಲರಾವ್, ಎನ್ನಾರ್ಪುರ

ಅಮ್ಮಂದಿರ ದಿನವನ್ನು ಹಾಲುಣಿಸುವುದರ ಮೂಲಕ ಸಂಪನ್ನಗೊಳಿಸಲಾಯಿತು...?

ಹೌದಂತೆ. ವೃದ್ಧಾಶ್ರಮದಲ್ಲಿ ದಾದಿ ತಾಯಿಗೆ ಹಾಲು, ಬಾರಲ್ಲಿ ವೇಯ್ಟರ್ ಮಗನಿಗೆ ಆಲ್ಕೋ–ಹಾಲು ಉಣಿಸಿದರಂತೆ.

ವಿ. ಹಮೀದ್, ವಿಟ್ಲ

ಹುಡುಗಿ ಮೊಬೈಲನ್ನು ಸೇಫ್ ಆಗಿ ಇಟ್ಟುಕೊಳ್ಳಬಹುದಾದ ಜಾಗ ಎಲ್ಲಿ ಸಾರ್?

ಬಿಗಿಯಲು ಸಿದ್ಧವಾಗಿರುವ ಬಿಗಿ ಮುಷ್ಟಿಯಲ್ಲಿ.

ಅಶೋಕ್ ಹಾಲಣ್ಣವರ್, ಲಕ್ಮೇಶ್ವರ

ಕನ್ನಡಮ್ಮನ ನಾಡಿನಲ್ಲಿ ಇಂಗ್ಲಿಷಮ್ಮನಿಂದ ಅನ್ನ ಸಿಗುತ್ತಿದೆ. ಏನ್ಮಾಡೋದು ಸಾರ್?

ಎರಡು ಭಾಷೆಗೂ ಭಂಗವಾಗದ ಸಂಸ್ಕೃತ ಜೀವನ ನಡೆಸಿ.

ಎನ್.ಆರ್. ತಮ್ಮಯ್ಯಶೆಟ್ಟಿ, ಅರಸೀಕೆರೆ

ಚಂದ್ರಮುಖಿ ಮತ್ತು ಮಂಗಳಮುಖಿಯರಲ್ಲಿ ಯಾರು ಶ್ರೇಷ್ಠರು?

ಶ್ರೇಷ್ಠತೆ ಇರುವುದು ಮುಖದಲ್ಲಲ್ಲ, ಗುಣದಲ್ಲಿ.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ

ಲೂಟಿಕೋರರು ಸಿಬಿಐ ತನಿಖೆ ಶುರುವಾದಾಗ ಗುರುಗಳ ಕಾಲು ಹಿಡಿಯುವುದು, ಗುಡಿಗೋಪುರ ಸುತ್ತುವುದು ಏಕೆ?

ಕೌಂಟ್, ಅಕೌಂಟ್ ಇಲ್ಲದಂತೆ ಹಣ ಶೇಖರಿಸುವ ವಿದ್ಯೆ ಕೆಲವು ಗುರುಗಳಿಗೆ ತಿಳಿದಿದೆಯಂತೆ.

ಸುಮನಾ, ತೆಲಂಗಾಣ

ಕೊರೊನಾ ಲಸಿಕೆ ಬಂತು; ಇನ್ನುಮುಂದೆ 'ಬೆಳ್ಳನೆ ಬೆಳಗಾಯಿತು' ಅಂತ ಹಾಡಬಹುದಾ ರಾಮಣ್ಣ?

ತನ್ನಲ್ಲೇ ಕೊರೊನಾ ಇದ್ದರೂ ಸೂರ್ಯ ಬೆಳ್ಳನೆ ಬೆಳಗನ್ನೇ ನೀಡುತ್ತಿದ್ದಾನೆ. ಆತ್ಮಶಕ್ತಿ ಲಸಿಕೆಯ ಅಪ್ಪ.

ಮಹದೇವಪ್ಪ ಬಿ, ಬೆಂಗಳೂರು

ಹೆಣ್ಣು ಭೂಮಿತೂಕಕ್ಕೆ ಸಮ ಎನ್ನುವುದು ಸರಿಯೇ?

ಗುಣಸಾಂದ್ರತೆಯಲ್ಲಿ ಅಷ್ಟೇ ಪ್ರಮಾಣದ ಚಿನ್ನ, ವಜ್ರಗಳು ಇರುವುದರಿಂದ, ಸರಿಯೇ.

ಹರಿತಸ, ಬೆಂಗಳೂರು

ಗುಡಿಯ ಗಂಟೆಶಬ್ದಕ್ಕೂ, ಪ್ರೇಮಿಗಳ ಹೃದಯಬಡಿತಕ್ಕೂ ವ್ಯತ್ಯಾಸವೇನು?

ಗಂಟೆಶಬ್ದವನ್ನು ಅದರ ಮೇಲೆ ಕಿವಿಯಿಟ್ಟು ಯಾರೂ ಕೇಳಬಯಸರು.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ

ಜನರು ಸಾವಿಗೆ ಹೆದರಿ ಬದುಕುವುದನ್ನೇ ಮರೆಯುತ್ತಿದ್ದಾರಲ್ಲಾ...?

'80% ಕಡಿತ; ಇಂದೇ ಕೊಳ್ಳಿರಿ' ಎಂದು ಬೋರ್ಡ್ ಹಾಕಿ; ಸೀನ್ ಛೇಂಜ್ ಖಚಿತ.

## ಬಹುಮಾನಿತ ಪ್ರಶ್ನೆ

ಶ್ರೀಕಾಂತ್ ಗಲಗಲಿ, ಬೆಂಗಳೂರು

ಫೋನಿನಲ್ಲಿ ಗಂಟೆಗಟ್ಟಲೆ ಮಾತನಾಡುವ ಹೆಂಗಸರು ಮನೆಯವರೊಡನೆ ಯಾಕೆ ಅಷ್ಟು ಮಾತನಾಡುವುದಿಲ್ಲ?

ಮನೆಯವರು ಇವರ ಮಾತನ್ನು ಆಲಿಸುವ ಆಸಕ್ತಿ, ಆ ಶಕ್ತಿ ಎರಡೂ ಇರುವುದಿಲ್ಲ.

ಆರ್. ಮಧುಸೂದನ್, ಹಾಸನ

ಗೋವಿನ ಜನ್ಮ ಪಡೆಯಲು ಯಾವ ಪುಣ್ಯದ ಕೆಲಸ ಮಾಡಿರಬೇಕು?

ವ್ಯಾಘ್ರದಂತಹವರ ಕೈಗೆ ಸಿಲುಕಿದಾಗಲೂ 'ಖಂಡವಿದೆಕೋ...' ಎನ್ನುತ್ತಾ ಟೋಪಿ ಹಾಕಿಸಿಕೊಳ್ಳಬೇಕು.

ಶೃತಿ ರಿಗ್ರೆಟ್ ಐಯ್ಯರ್, ಬೆಂಗಳೂರು

ಧರ್ಮ, ಸತ್ಯ, ನ್ಯಾಯ ಇಂದು ಎಲ್ಲಿ ನಿಂತಿವೆ?

ಇನಿತೂ ಅಲುಗಾಡದೆ ಗಾಂಧಿಯ ಪ್ರತಿಮೆಯ ಜೊತೆಜೊತೆಯೇ.

ಎಂ.ಎ. ಕುಮಾರ್, ಬೆಂಗಳೂರು

ಗಂಡಸರ ಕಣ್ಣುಗಳು ಎಷ್ಟು ವಯಸ್ಸಿನವರೆಗೆ ಹೆಣ್ಣನ್ನು ನೋಡಲು ಬಯಸುತ್ತವೆ?



ಹೆಣ್ಣು ಅಂದವಾಗಿ ಕಾಣಿಸುವಷ್ಟು ವಯಸ್ಸಿನವರೆಗೆ.

ಪಿ. ಜಯವಂತ ಪೈ, ಕುಂದಾಪುರ

ಒಂದೆಡೆ ಹನುಮನ ಮೂರ್ತಿಗೆ ಕೊರೊನಾ ಮಾಸ್ಕ್ ಹಾಕಿ ಪೂಜೆ ಸಲ್ಲಿಸಿದರಂತಲ್ಲಾ...?

ಮುಖ್ಯಪ್ರಾಣನೇ ಧರಿಸಿರುವಾಗ ಅಲ್ಪಪ್ರಾಣಿಗಳಾದ ನೀವೂ ಧರಿಸಿರೆಂದು ಸೂಚಿಸಲಂತೆ.

ಕೆ. ಹರಿಪ್ರಸಾದ್ ಸಗ್ರಿ, ಕುಂಜಿಬೆಟ್ಟು

ಮದುವೆಯು ಜನ್ಮಜನ್ಮಾಂತರದ ಅನುಬಂಧವೆಂದು ಹೇಳುತ್ತಿದ್ದರೂ ವಿಚ್ಛೇದನಗಳು ಹೆಚ್ಚುತ್ತಿರುವುದೇಕೆ?

ಮದುವೆ = ಲಗ್ನ. 'ಲಗ್ನ' ಪದಕ್ಕೆ 'ಸೇರು', 'ಕತ್ತರಿಸು' ಎರಡೂ ಅರ್ಥಗಳಿವೆ.

■ ರಾಮ್

ಪ್ರಶ್ನೆ ಕಳುಹಿಸಲು: editorsu@sudha.co.in